



## ಅಪ್ಪಿ ಅಪ್ಪಿ!

ಕಲರ್ಸ ಕನ್ನಡದಲ್ಲಿ ಪ್ರಸಾರವಾಗುವ 'ಮಿಥುನ ರಾಶಿ' ಇತ್ತೀಚೆಗೆ ಸ್ವಾರಸ್ಯವನ್ನೇ ಕಳೆದುಕೊಂಡಿದೆ. ರಾಶಿ ಅಪ್ಪಿ ಅಪ್ಪಿ ಎನ್ನುತ್ತ ಆ ಆಟೋರಿಕ್ಷಾವನ್ನು ಕನವರಿಸುತ್ತ ಮನೆಯವರೆಲ್ಲರ ತಲೆ ತಿನ್ನುವುದು ವಿಪರೀತವೆನಿಸುತ್ತದೆ. ಇಲ್ಲಿ ಭಾವನಾತ್ಮಕ ಸಂಬಂಧ ಸೊರಗಿ ಬರೀ ಹುಚ್ಚಾಟವೆನಿಸುತ್ತದೆ. ವೀಕ್ಷಕರ ಸಮಯವನ್ನು ಅಪ್ಪಿ ಸೋಗಿನಲ್ಲಿ ಹಾಳು ಮಾಡಿ ತಾಳ್ಮೆ ಪರೀಕ್ಷಿಸುವುದು ತರವಲ್ಲ.

—ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು

## ತಾಳ ಮೇಳವಿಲ್ಲದ ಗಟ್ಟಿ ಮೇಳ

ಅಂತೂ ಇಂತೂ ನಾಲ್ಕರಲ್ಲಿ ಒಂದು ಹುಡುಗಿ ಕುತ್ತಿಗೆಗೆ ತಾಳಿ ಬಿತ್ತು. ಮಗನ ಮದುವೆಯ ಹೊತ್ತಿಗೆ ಅಪ್ಪನೇ ನಾಪತ್ತೆ. ಸೊಸೆಯ ಅಪ್ಪ ಅಮ್ಮನೂ ಪತ್ತೆಯಿಲ್ಲ. ಅಗ್ರಜನಿಲ್ಲದೆ ತಾಳಿ ಕಟ್ಟಲ್ಲ ಎನ್ನುವ ಮದುಮಗ, ಮಗನ ಮದುವೆಗೆ ಕಲ್ಲು ಹಾಕಲು ಟೊಂಕ ಕಟ್ಟಿರುವ ತಾಯಿ, ಪ್ರಿಯತಮೆಯನ್ನು ಸಾವಿರ ಬಾರಿ ಕ್ಯಾಚ್ ಹಿಡಿದು ಮನದಲ್ಲೇ ಮಂಡಿಗೆ ತಿಂದರೂ ಪ್ರೀತಿ ಅರ್ಥವಾಗಿಲ್ಲವೆನ್ನುವ ಅಗ್ರಜ, ಇದ್ದಕ್ಕಿದ್ದಂತೆ ಇನ್ನೊಂದು ಮದುವೆ ನಿಶ್ಚಿತಾರ್ಥ. ಸಣ್ಣ ಪುಟ್ಟ ವಿಷಯಕ್ಕೂ ಹೃದಯಾಘಾತವಾಗುವ ಹುಡುಗಿ ತಾಯಿಗೆ ಹಸೆ ಮೇಲೆ ಕೂತಿದ್ದು ಮಗಳಲ್ಲ ಎಂದು ಹೇಳಿದಾಗಲೂ 'ಗಟ್ಟಿ' ಹೃದಯ. ಮುಸುಕಿನೊಳಗಿನ ಮದುವೆ ಹೀಗೆ ಕಾಲಿಲ್ಲದೆ ಓಡುವ, ತಾಳಮೇಳವಿಲ್ಲದ ಕಥೆ. ನಡುವೆ ಮೂರನೇ ಹುಡುಗಿಗೆ ಒಬ್ಬ ಹೀರೊ ರೆಡಿ. ನಾಲ್ಕನೇ ಮಗಳು ಬಹುಶಃ ಧಾರಾವಾಹಿ ಮುಗಿಯುವ ಹೊತ್ತಿಗೆ ಪ್ರಾಪ್ತ ವಯಸ್ಕಳಾಗಬಹುದು. ಒಂದು ತಾಳಿಗೆ ಒಂದು ವರ್ಷ ಸಮಯವಾದರೆ ನಾಲ್ಕನೇ ತಾಳಿಗೆ ಕನಿಷ್ಠ ನಾಲ್ಕು ವರ್ಷ! ತಾಳಿ ಬೀಳುವವರೆಗೆ ತಾಳಿದವರು ಬಾಳಿಯಾರಲ್ಲವೇ?

—ವಾ. ಮುರಳೀಧರ, ತೀರ್ಥಹಳ್ಳಿ

## ದಾಂಪತ್ಯಕ್ಕೆ ಅನ್ಯಾಯ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಮಂಗಳ ಗೌರಿ' ಮದುವೆ ಧಾರಾವಾಹಿಯಲ್ಲಿ ರಾಜೀವ ಮತ್ತು ಮಂಗಳಗೌರಿ ಮದುವೆಯಾಗಿ ತಿಂಗಳುಗಳಾಗಿವೆ. ಅವರಿಬ್ಬರೂ ಒಂದೇ ಮನೆಯಲ್ಲಿ ವಾಸಿಸುತ್ತಿದ್ದರೂ ಇಲ್ಲಿಯವರೆಗೆ ಮನೆಯವರಿಗೆ ಅವರು ದಂಪತಿ ಎಂಬುದು ತಿಳಿದಿಲ್ಲ. ವಾಸ್ತವದಲ್ಲಿ ಈ ರೀತಿ ನಡೆಯಲು ಸಾಧ್ಯವೇ? ಧಾರಾವಾಹಿಗಳು ಜನರ ಮನಸ್ಸಿಗೆ ಆಪ್ತವಾಗುವಂತೆ ನೈಜ ಜೀವನಕ್ಕೂ ಹತ್ತಿರವಾಗುವಂತಿರಬೇಕು. ಆದರೆ ಈ ರೀತಿ ಅಸಂಬದ್ಧ ಕತೆಗಳು ಜನರನ್ನು ಯಾವ ದಾರಿಯಲ್ಲಿ ನಿಲ್ಲಿಸಬಹುದು ಎಂಬುದನ್ನು ನಿರ್ದೇಶಕರು ಯೋಚಿಸಬೇಕು.

—ಮನಸ್ವಿ, ಬೆಂಗಳೂರು

## ಆಪ್ತ ಗಟ್ಟಿಮೇಳ

ಇತ್ತೀಚಿನ ದಿನಗಳಲ್ಲಿ ಜೀ ಕನ್ನಡ ವಾಹಿನಿಯ 'ಗಟ್ಟಿಮೇಳ' ಧಾರಾವಾಹಿ ಯಾಕೋ ಮನಸ್ಸಿಗೆ ಆಪ್ತ ಎನ್ನಿಸುತ್ತದೆ. ವೇದಾಂತ್ ವಸಿಷ್ಠ ಹಾಗೂ ಅಮೂಲ್ಯ ಪಾತ್ರ ಮನಸ್ಸಿಗೆ ಖುಷಿ ಕೊಡುತ್ತವೆ. ಪರಿಮಳ ಕುಟುಂಬದಂತಹ ಸುಂದರ ಕುಟುಂಬ ನಿಜಕ್ಕೂ ನಮಗೆ ಖುಷಿ ಕೊಡುತ್ತದೆ. ಆದರೆ ಆರತಿಯಂತಹ ಒಳ್ಳೆಯ ಸೊಸೆ ಪಡೆದ ಮೇಲಾದರೂ ವಿಕ್ರಾಂತ್ ತಾಯಿ ಬದಲಾಗಲಿ.

—ಸುಷ್ಮಾ, ಚೋರಾಡಿ

**ವಾರದ ಪತ್ರ**

## ಸಂಗೀತ ರಸದೌತಣ

ಯುಗಾದಿಯ ದಿನ ಪ್ರಸಾರವಾದ 'ಪಲ್ಲವಿ ಅನುಪಲ್ಲವಿ' ಕಾರ್ಯಕ್ರಮ ನಿಜಕ್ಕೂ ಅದ್ಭುತವಾಗಿತ್ತು. ಇಳಯರಾಜಾರ ಸಂಗೀತಕ್ಕೆ ಮಾರುಹೋಗದವರಿಲ್ಲ. ಎಂಬತ್ತರ ದಶಕದಲ್ಲಿ ಅವರ ಸಂಯೋಜನೆಯ ಪ್ರತಿಯೊಂದು ಹಾಡುಗಳೂ ಆಕಾಶವಾಣಿಯಲ್ಲಿ ಬಿತ್ತರಗೊಳ್ಳುತ್ತಾ ಕೇಳುಗರಿಗೆ ಕರ್ಣಾನಂದ ಉಂಟುಮಾಡುತ್ತಿದ್ದವು. ಎಸ್ಪಿಬಿಯವರ ಧ್ವನಿ ಮತ್ತು ಇಳಯರಾಜಾರ ಜೋಡಿ ಎಂಥ ಅರಸಿಕನನ್ನೂ ಮರುಳು ಮಾಡುವುದರಲ್ಲಿ ಸಂಶಯವಿಲ್ಲ. ಅಂಥ ಇಬ್ಬರು ದಿಗ್ಗಜರನ್ನು ಚಿಕ್ಕ ಪರದೆಯ ಮೇಲೆ ಕಣ್ತುಂಬಿಸಿಕೊಳ್ಳುತ್ತಾ, ಅವರಿಬ್ಬರ ಮಾತು ಚಟಾಕಿಗಳನ್ನು ಕೇಳಿಸಿಕೊಳ್ಳುತ್ತಾ, ಬೇರೆ ಬೇರೆ ಗಾಯಕರು ಮತ್ತು ಸಾಹಿತಿಗಳನ್ನು ವೇದಿಕೆಯ ಮೇಲೆ ನೋಡುತ್ತಾ, ಹಾಡುಗಳನ್ನು ಕೇಳುತ್ತಾ ಮೂರು ಗಂಟೆ ಕಳೆದದ್ದೇ ಗೊತ್ತಾಗಲಿಲ್ಲ. ಅಚ್ಚರಿ ನೀಡಿದ ಇನ್ನೊಂದು ಸಂಗತಿಯೆಂದರೆ ಇಳಯರಾಜಾ ಅವರೇ ಕೆಲವು ಹಾಡುಗಳನ್ನು ಹಾಡಿದರು. ಇಂಥ ಅಮೋಘ ಸಂಗೀತದ ರಸದೌತಣವನ್ನು ಕಲರ್ಸ್ ಕನ್ನಡ ನೀಡಿತು.

—ಕೆ. ಬಿ. ರಂಗಸ್ವಾಮಿ, ತುಮಕೂರು

## ಬುದ್ಧಿ ಕಲಿಸಬೇಕು

ಕನ್ನಡ ಕಲರ್ಸ್‌ನ 'ಗೀತಾ'ದಲ್ಲಿ ಎಂಎಲ್‌ಎ ಸಾಹೇಬರು ತಮ್ಮ ಸ್ವಂತ ಮಗನಿಗೆ ಬುದ್ಧಿ ಕಲಿಸಿದ ರೀತಿ ಚೆನ್ನಾಗಿತ್ತು. ಅದೇ ರೀತಿ ಮನೆಯಲ್ಲಿ ಇರುವ ಭಾವಮೈದುನನಿಗೆ ಸರಿಯಾಗಿ ಬಿಸಿ ಮುಟ್ಟಿಸಬೇಕಾಗಿತ್ತು. ಮಗನ ಕಾಲೇಜು ಸ್ನೇಹಿತರಿಗೆ ಪೊಲೀಸರ ಮೂಲಕ ರುಬ್ಬಿಸಬೇಕಾಗಿತ್ತು. ಆಗ ಸಾಹೇಬರ 'ಘನತೆ' ಇನ್ನು ಹೆಚ್ಚಾಗಿ ಧಾರಾವಾಹಿಗೆ ಮೆರುಗು ಬರುತಿತ್ತು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ನವಿರಾದ ಕಥೆ

ಝೀ ಕನ್ನಡದಲ್ಲಿ ಪ್ರಸಾರ ವಾಗುತ್ತಿರುವ 'ಜೊತೆ ಜೊತೆಯಲಿ' ಧಾರಾವಾಹಿಯು ಹೆಸರಿಗೆ ತಕ್ಕಂತೆ ತನ್ನ ಪಾತ್ರಗಳನ್ನು ಜೊತೆಜೊತೆಯಲ್ಲಿಯೇ ತೆಗೆದು ಕೊಂಡು ಹೋಗುತ್ತಿದೆ. ಭಾಷಾ ಉಚ್ಚರಣೆ ಮತ್ತು ನಟನೆ ಗಮನ ಸೆಳೆಯುತ್ತಿದೆ. ಮಾನಸಿ, ರಮಾ ಸಂಪತ್, ಮೀರಾ ಮುಂತಾದವರ ಅಭಿನಯ ಸೂಪರ್. ಈ ಎಲ್ಲರಿಗೂ ಕಳಸವಿಟ್ಟಂತೆ ಆರ್ಯವರ್ಧನ ಅನು ಅಭಿನಯ ಖುಷಿ ಕೊಡುತ್ತದೆ. ನವಿರಾದ ನವೀನ ಕಥೆ ಸುಂದರ ಕಾವ್ಯದಂತೆ ಭಾಸವಾಗುತ್ತದೆ.

—ಶೋಭಾ ಅರವಿಂದ, ಶಿವಮೊಗ್ಗ

## ಅಸ್ಪಷ್ಟ ಧ್ವನಿ

ಕಲರ್ಸ್ ಸೂಪರ್‌ನ 'ಶಾಂತಂ ಪಾಪಂ' ಧಾರಾವಾಹಿಯಲ್ಲಿ ನಿರೂಪಕಿಯ ಧ್ವನಿ ಸರಿಯಾಗಿ ರೆಕಾರ್ಡಿಂಗ್ ಆಗದೆ ಕೇಳಲು ಸರಿಯಾಗುತ್ತಿಲ್ಲ. ನಿರ್ವಾಹಕರು ಗಮನಿಸಿ ಪ್ರಸಾರ ಮಾಡಿ.

—ಮಹಾವೀರ ಕಾಸರ ಶಿವಮೊಗ್ಗ

## ಕಥೆ ಕಳೆಗುಂದಿವೆ

ಝೀ ಕನ್ನಡದ 'ಯಾರೆ ನೀನು ಮೋಹಿನಿ' ಹಾಗೂ 'ಕಮಲಿ' ಮೊದಲು ವೀಕ್ಷಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದರೂ ಈಗ ಕಥೆ ಗಟ್ಟಿತನ ಕಳೆದುಕೊಳ್ಳುತ್ತಿದೆ. ಕಥೆ ಯಾವುದೇ ರೀತಿಯ ಮಾನವೀಯ ಸಂದೇಶ ನೀಡುವಲ್ಲಿ ವಿಫಲವಾಗಿದೆ.

—ಕುಬೇರಪ್ಪ ವಿಭೂತಿ ಹರಿಹರ

## ವನಜೆ ಅಂದರೆ ತಾವರೆ

ನಾನು 'ಕನ್ನಡತಿ'ಯನ್ನು ವೀಕ್ಷಿಸಿಲ್ಲ. (ಅಷ್ಟೇ ಏಕೆ 'ಮಗಳು ಜಾನಕಿ'ಯನ್ನೇ ನೋಡುವುದನ್ನು ಬಿಟ್ಟು ಬಹಳ ದಿನಗಳಾದವು) ಎನ್.ಡಿ. ವೆಂಕಟಸುಬ್ಬುರವರ ಅರ್ಥೈಸುವಿಕೆ ಕುರಿತಂತೆ: ವನಜ =ವನೇಜ =ಕಮಲ/ತಾವರೆ ವನಜಾಕ್ಷಿ ಎಂಬ ಹೆಸರು ಜನಪ್ರಿಯ. ವನಜಮುಖಿ ಎಂಬುದನ್ನು ಅಷ್ಟಾಗಿ ಕೇಳಿಲ್ಲ. ಅದಿರಲಿ. ಕಾಡಿನಲ್ಲಿ ಹುಟ್ಟಿದವಳು ಎಂದರೆ ಏನರ್ಥ? ಕಾಡು ಮನುಷ್ಯಳು ಎಂದಿರಬಹುದೆ? ವನಜ/ವನಜಾಕ್ಷಿ/ವನಜಮುಖಿ ಎಂಬ ಹೆಸರಿನವರು ಮೊಕದ್ದಮೆ ಹೂಡದಿರಲಿ!

—ಎ. ಜಾನಕಿರಾಮ್, ಬೆಂಗಳೂರು